ಸಂತೋಷ ಗುಡ್ಡಿಯಂಗಡಿ ಉಡುಪಿ ಜಿಲ್ಲೆಯ ಗುಡ್ಡಿಯಂಗಡಿಯವರು. ಪ್ರಸ್ತುತ ನಂಜನಗೂಡು ತಾಲ್ಲೂಕಿನ ಹೆಗ್ಗಡಹಳ್ಳಿಯ ಸರ್ಕಾರಿ ಪ್ರೌಢ ಶಾಲೆಯಲ್ಲಿ ಮಕ್ಕಳ ಪ್ರೀತಿಯ ನಾಟಕದ ಮೇಷ್ಟ್ರು. ವಿಜ್ಞಾನ ನಾಟಕಗಳು, ಸಮಾಜಮುಖಿ ಅಭಿಯಾನಗಳ ಮೂಲಕ ಅವರು ಮಕ್ಕಳ ಮನಸ್ಸನ್ನು ಕಟ್ಟುವ ಕೆಲಸದಲ್ಲಿ ಸದಾನಿರತರು. 'ಕೊರಬಾಡು' ಪ್ರಕಟಿತ ಕಥಾಸಂಕಲನ.

ಅವನ ನಂಜನಗೂಡ್ಲ ಭಾಷೆಗೂ ಆ ಜನಗಳು ಮಾತಾಡೋ ಭಾಷೆಗೂ ಟ್ಯಾಲಿ ಆಗೋದ್ರಿಂದ ಅವನ ಭಾಷೆ ಅವನಲ್ಲೇ ಉಳ್ದಿತ್ತು. ಆದ್ರ ಆ ಇಬ್ರೂವಿ ತಮ್ಮೂರ ಲ್ಯಾಂಗ್ವೇಜ ಜಿನ ಜಿನ ಮರಿತಾ ಅಂಕಪ್ಪನ ಬಾಶೆಯ ಕಲಿತಾ ಒಂಜಿನ ಕಲ್ತೇ ಬುಟ್ಟು ಅವ್ನಿಗಿಂತ ವೈನಾಗಿ ಮಾತಾಡ್ತಾ ಬೇಕರಿಯ ಓನರನ್ನ ಕಾಸಿನ ಗುಡ್ಡೆ ಮೇಲೆ ಕೂರ್ಸಿದ್ದರು. ಈ ಮೂರ್ ಐಕ್ಳು ಬೇಕರಿಯ ಬಾಳಾಟದಲ್ಲಿ ಪಪ್ಪು, ಬನ್ನು ಬ್ರೆಡ್ಡು, ಬಿಸ್ಕತ್ತು ಮಾಡೋದ್ನ ಕಲ್ತಕಂಡು ಮುಂದ್ಕ ತಾವೂವಿ ತಮ್ಮೂರಲ್ಲಿ ಇಂಥಾ ಬೇಕರಿಯ ಮಡ್ಗಿ ಓನರ್ ಆಗ್ಬೇಕು ಅಂತ ಆಗಾಗ ಮಾತಾಡ್ಕತಾ ಇದ್ರೂ ಇದೇ ಬೇಕರಿನಲ್ಲೇ ಕೆಲಸ ಮಾಡ್ಕಂಡಿದ್ರು. ಅಂಕಪ್ಪ ತಿಂಗ್ಳ ತಿಂಗ್ಳ ಅಪ್ಪ ಅವ್ವಿಗ ಕಾಸು ಕಳಿಸ್ತಾ ಯಾವಾಗರ ಅಪ್ಪ ಹೆಗ್ಡಳ್ಳಿಗ ಹೋಗ್ಬುಟ್ಟು ಪೋನ್ ಮಾಡಿದ್ರ ಮಾತಾಡ್ತಿದ್ದ. ಈ ಸಲ ಊರ್ಗ ಹೋಗೋ ಟೇಮಿಗ ಹೊಸಾದು ಸ್ಕ್ರೀನ್ ಟಚ್ಚು ಪೋನು ತಕ್ಕಂಡು ಹೋಗ್ಬೇಕು ಅಂತ ಪೋನ್ ತಕ್ಕಳಕ್ಕಂತನಿಯಾ ಗೋಲ್ಕ ಮಡ್ಗಿದ್ದ.

ಓನರು ಇನ್ನೇನು ಬಾಕ್ಲು ಹಾಕ್ಬೇಕು ಆ ಹೊತ್ನಲ್ಲಿ ಅಂಕಪ್ಪಗ ತನ್ನ ಗೋಲ್ಕ ಮನ್ಸಿಗ ಬಂದು ಸರಕ್ಕ ನುಗ್ಗಿ ಗೋಲ್ಕದ ಜೊತ್ಗ ಮೂರ್ ಪ್ಯಾಕೇಟು ಬ್ರೆಡ್ಡು ತಗಂಡು ಬಂದ. ತನ್ನ ಫ್ರೆಂಡ್ಸಿಗ ಒಂದೊಂದ್ ಬ್ರೆಡ್ಡು ಕೊಟ್ಟು ತಾನೊಂದು ಪ್ಯಾಕೇಟ್‌ನ ಬ್ಯಾಗಿಗ ಹಾಕಂಡ. ರಾತ್ರಿ ಹೆಚ್ಚಾಯ್ತಾ ಆಯ್ತಾ ಆ ಬಸ್ ಸ್ಟ್ಯಾಂಡು ಜನಗಳ ತುಂಬಿಸ್ಕಳ್ತಿತ್ತು. ಉಟ್ಟಬಟ್ಟೇಲೇ ಆ ಜನಗಳು ಐಕ ಮಕ್ಕಳನ್ನ ಕಟ್ಕಂಡು ಮುಖದ ತುಂಬಾ ಭಯಾನ ಮೆತ್ಗಂಡು, ಹೊತ್ಗಂಡು ಓಡಾಡ್ತಿದ್ರು. ರೈಲ್ವೆ ಸ್ಟೇಷನಿಗ ಹೋಗ್ಬಿಟ್ರ ಹೆಂಗಾರ ಊರ್ನ ಸೇರ್ಕಬೌದು ಅಂತ ಕೆಲವ್ರು, ಅಲ್ಲಿಗ ಹೋಗಾಕ ಏನಾರ ಸಿಕ್ಕಿತಾ? ಅಂತ ಕೆಲವ್ರು, ಮೆಟ್ರೋ ಸಿಗ್ಬೌದು ಅಂತ ಕೆಲವ್ರು, ಆಟೋ ಸಿಕ್ರ ಹೋಗ್ಬಿಡಾವು ಬನ್ನಿ ಅಂತ ಕೆಲವ್ರು, ಬಸ್ಸು, ಟ್ರೇನು, ಮೆಟ್ರೋ, ಆಟೋ ಏನಂದ್ರ ಏನೂ ಓಡಾಡಲ್ವಂತ ಕೆಲವ್ರು... ಹೀಂಗ ಜನ ತಲಗೊಂದೊಂದು ಮಾತಾಡ್ತಾ ಆ ಸ್ಯಾಟಲೈಟು ಬಸ್ ಸ್ಟ್ಯಾಂಡಿನೊಳಗ ಸ್ಯಾಟಲೈಟು ಯುಗದೊಳಗ ದಿಕ್ಕೆಟ್ಟು ನಿಂತಿದ್ರು.

'ತನಗಾದ್ರ ಒಂದೇ ರೋಡು. ಯಾವ್ದಾರ ಲಾರಿ ಸಿಕ್ರೂ ಸಾಕು ಮಯ್ಸೂರಿಗ ವೊಂಟೋಯ್ತಿನಿ. ಆದ್ರ ತನ್ ಫ್ರೆಂಡ್ಸುಗ ಹಾಗಲ್ಲ. ಕುಂದಾಪ್ರ, ಬಿಜಾಪುರ ಸ್ಯಾನೆ ದೂರ. ಎಂಗೋಯ್ತಾರೋ ಕಾಣೆ! ನೂರಾಳಪ್ಪ ಈ ಜನಗಳ ಎಂಗಾರೂವಿ ಹಟ್ಟಿಗ ತಲುಪ್ಸಿಬುಡು. ನಂಜುಂಡೇಸ್ವರ ಕಾಪಾಡಪ್ಪ' ಅಂತ ಆ ಅಂಕಪ್ಪ ಕತ್ಲೆನಲ್ಲಿ ತನ್ನ ಫ್ರೆಂಡ್ನ ಕಯ್ಯ ಹಿಡ್ಕಂಡು ಬಸ್ಸು ಬರ್ಬೌದು ಅಂತ ಕಾಯ್ತಿದ್ದ. ತನ್ನ ಫ್ರೆಂಡ್ಗಳ ರೈಲ್ವೆ ಸ್ಟೇಶನ್ನಿಗ ಕಳಿಸ್ಬುಟ್ಟು ತಾನು ಊರ್ದಿಕ್ಕ ವೊಯ್ತೀನಿ ಅಂತ ಕೂತಿದ್ದ. ರಾತ್ರಿ ಬೆಳಿತಿದ್ದಂಗೆ ಅಲ್ಲಿ ಜನಗಳೂ ಬೆಳಿತಿದ್ರು. ರಾತ್ರಿ ಬೆಳಿತಿದ್ದಂಗೆ ಆತಂಕ ಪಟ್ಕಂಡಿದ್ದ ಕಣ್ಣಳಿಗೂ ನಿದ್ದೆ ಅನ್ನೋದು ಒತ್ತಾಯದಲ್ಲಿ ಬಂದು ಅಂತೂ ಬೆಳಕರೀತು.

ಅಶ್ಟೆ. ಮುಂದ್ಕ ಲಾಟಿಗಳು ಮಾತಾಡ್ತಾ ಬಂದವು. ಆ ಲಾಟಿಗಳು ಜನ್ಗಳ ಗುಂಪಿನ ಮ್ಯಾಕ ಕವುಚ್ಕಂಡು ಬಿದ್ದವು. ಒಬ್ರು ಪಕ್ಕುಕ್ಕ ಒಬ್ರು ಇರ್ಬಾರ್ದು ಅಂತ ಏಟು, ಗುಂಪು ಕಟ್ಗಂಡವ್ರೆ ಅಂತ ಏಟು, ಮುಖಕ್ಕ ಮಾಸ್ಕು ಹಾಕಂಡಿಲ್ಲಾಂತ ಏಟು, ಬೀದಿಗ ಬಂದಿದ್ಯಾಕ ಅಂತ ಏಟು. ಏಟೂ... ಏಟೂ... ಏಟು. ದಿಕ್ಕೆಟ್ಟು ಕೂತಿದ್ದ ಜನ ದಿಕ್ಕಾಪಾಲಾಯ್ತು. ಊರ್ಗ ತಲುಪಿದ್ರ ಸಾಕು ಅಂತಿದ್ದವ್ರು ಏಟು ತಪ್ಸಿಸ್ಗಂಡ್ರ ಸಾಕು ಅಂತ ಸ್ಯಾಟಲೈಟು ಬುಟ್ಬುಟ್ರು. ಅಂಕಪ್ಪ ಮತ್ತ ಅವ್ನ ಫ್ರೆಂಡ್ಸಿಗ ಅಂಡು, ಕಾಲು, ಕಯ್ಗೆಲ್ಲ ಏಟುಗಳು ಬಿದ್ದವು. ಆ ಏಟಿಗ ಹಿಡ್ಕಂಡು ಕೂತಿದ್ದ ಕೈಗಳ ಬುಟ್ಬುಟ್ಟು ಮೂರ್ಜನಾವಿ ಮೂರ್ ದಿಕ್ಕಿಗ ಓಡಿದರು.

ಆ ಸಿಟಿಯ ರೋಡುಗಳ ತುಂಬಾ ಲಾಟಿಗಳು ಮುರ್ಕಂಡು ಬಿದ್ದಿದ್ವು. ಬೆಳ್ಗನಗ ಹಾಲಿಗ ಅಂತ ಬಂದವ್ರುಗ ಏಟು. ಅಂಗಡಿ ಬಾಕ್ಲು ತೆಗ್ದಿದ್ದಾ